ತೆಗೆದುಬಿಟ್ಟಿದ್ದೀರಾ, ಈಗ ಎಲ್ಲವನ್ನೂ ರಿಜಿಸ್ಟರ್ ಪಾರ್ಸೆಲ್ ಮಾಡಬೇಕಾ? ನೂರು ರೂಪಾಯಿ ಪುಸ್ತಕಕ್ಕೆ ನಲವತ್ಮೂರು ರೂಪಾಯಿ ಚಾರ್ಜ್ ಜೊತೆಗೆ ಅದರ ಪ್ಯಾಕಿಂಗ್ ಎಲ್ಲ ಸೇರಿ ಹೆಚ್ಚೂಕಡಿಮೆ ಐವತ್ತು ರೂಪಾಯಿಯಾಗುತ್ತದೆ, ಜೊತೆಗೆ ಇಲ್ಲಿಗೆ ಬಂದು ಹೋಗುವ ಖರ್ಚು. ಹೀಗಾದರೆ ಲೇಖಕರು ಓದುಗರಿಗೆ ಪುಸ್ತಕ ಕಳಿಸೋದು ಹೇಗ್ರೀ. ಮೊದಲೇ ಕನ್ನಡ ಪುಸ್ತಕಗಳನ್ನು ಕೊಂಡು ಓದುವ ಓದುಗರು ಕಡಿಮೆಯಾಗಿದ್ದಾರೆ, ಈಗ ಈ ಹೊಡೆತ ಬೇರೆ' ಎಂದು ಅಲವತ್ತುಕೊಳ್ಳುತ್ತಿದ್ದ.

'ನಮ್ಕೈನಲ್ಲೇನೈತ್ರೀ ಸರ್ರಾ. ಬಾಳ ಮಂದಿ ಈ ಪ್ರಿಂಟೆಡ್ ಪುಸ್ತಕ ಕಳಿಸೋ ಅವಕಾಶವನ್ನು ಮಿಸ್ ಯೂಸ್ ಮಾಡ್ಕೊಳ್ಳಾಕ ಶುರು ಮಾಡಿದ್ರು, ಜೆರಾಕ್ಸ್ ಕಾಪಿ ಎಲ್ಲ ಗೊತ್ತಾಗದಂಗ ಇದೇ ಕ್ಯಾಟಗರಿನಾಗ ಕಳಿಸಾಕತ್ತಿದ್ರು, ಹಂಗಾಗಿ ಈ ನಿರ್ಧಾರಕ್ಕೆ ಬರ್ಬೇಕಾತಂತ್ರೀ' ಎಂದು ಆ ಸಿಬ್ಬಂದಿಯೂ ತಾಳ್ಮೆಯಿಂದ ಉತ್ತರಿಸುತ್ತಿದ್ದ.

'ಏನೇ ಆದರೂ ಹೊಡೆತ ಮಾತ್ರ ಪ್ರಕಾಶಕರಿಗೆ, ಲೇಖಕರಿಗೆ, ಓದುಗರಿಗೆ ಬಿಡಿ' ಎಂದು ಅಸಹನೆಯನ್ನು ವ್ಯಕ್ತಪಡಿಸುತ್ತಲೇ ಪೋಸ್ಟ್ ಮಾಡಲು ಹೇಳಿದ.

ಅವರಿಬ್ಬರ ಸಂಭಾಷಣೆ ಕೇಳುತ್ತಿದ್ದಂತೆ, ಮಾಲಿನಿಯೂ ಹೌಹಾರಿದ್ದಳು. ತನ್ನ ಮೂರು ಪುಸ್ತಕಗಳೂ ಸೇರಿಸಿ ಒಂದೇ ಕವರ್ ಮಾಡಿಕೊಂಡು ಬಂದಿದ್ದರಿಂದ ನಲವತ್ಮೂರು ರೂಪಾಯಿ ಪರವಾಗಿಲ್ಲ ಎನಿಸಿತ್ತು. ಹಾಗಾಗಿ ಐವತ್ತು ರೂಪಾಯಿಯ ಜೊತೆ ಐದಾರು ರೂಪಾಯಿ ಚಿಲ್ಲರೆಯನ್ನು ಹೊರತೆಗೆದು ಇಟ್ಟುಕೊಂಡಳು. ಆದರೂ ಒಂದೇ ಒಂದು ಪುಸ್ತಕ ಕಳಿಸುವವರಿಗೆ, ಕೊಳ್ಳುವವರಿಗೆ ನಿಜಕ್ಕೂ ಆತಂಕದ ಸಂಗತಿಯಿದು ಎನಿಸದಿರಲಿಲ್ಲ. ಹೀಗೆ ಒಬ್ಬೊಬ್ಬರದು ಒಂದೊಂದು ಕ್ಯಾತೆ, ತಗಾದೆ, ಪ್ರಶ್ನೆಗಳ ಜೊತೆ ಕ್ಯೂ ಮತ್ತಷ್ಟು ನಿಧಾನವಾಗಿ ತೆವಳುತ್ತ, ಕ್ಯೂನಲ್ಲಿ ನಿಂತವರ ತಾಳ್ಮೆ ಪರೀಕ್ಷಿಸುತ್ತಿತ್ತು.

ಅಂತೂ ಮಾಲಿನಿಯ ಸರದಿ ಬಂದು, ಪುಸ್ತಕದ ಕಟ್ಟು ತೂಕ ಹಾಕುತ್ತಿದ್ದಂತೆ ಐನೂರಾ ಹದಿನೈದು ಗ್ರಾಂ ತೋರಿಸಿತು. 'ಮೇಡಂ, ಐನೂರು ಗ್ರಾಂನಿಂದ ಸಾವಿರ ಗ್ರಾಂನವರೆಗೂ ನಲ್ವತ್ಮೂರರ ಮೇಲೆ ಹದಿನಾರು ರೂಪಾಯಿ ಹೆಚ್ಚಾಗುತ್ತದೆ' ಎಂದಾಗ ಪೆಚ್ಚಾಗಿ 'ಹೂಂ' ಎಂದು ಹಣ ಎಣಿಸಿಕೊಟ್ಟಳು. ಪೋಸ್ಟ್ ಮಾಡುವ ಹೊತ್ತಿಗೆ ಹೆಚ್ಚೂ ಕಡಿಮೆ ನಾಲ್ಕೂಕಾಲು ಆಗಿತ್ತು. ಹೊರಗೆ ಬಂದವಳಿಗೆ, ಆ ಹುಡುಗ ಯಾರನ್ನೋ ಏನೋ ವಿಚಾರಿಸುತ್ತಿದ್ದುದು, ಅವರು ತಲೆಯಾಡಿಸುತ್ತಿದ್ದುದು ಕಣ್ಣಿಗೆ ಬಿತ್ತು. ಮನಸ್ಸು ತಡೆಯಲಿಲ್ಲ. ಇವನ ಸಮಸ್ಯೆಯಾದರೂ ಏನಿರಬಹುದು ಎಂದುಕೊಂಡು ಅವನ ಬಳಿ ಹೋಗಿ 'ಏನಪ್ಪಾ ತಮ್ಮ ನಿನ್ನ ಸಮಸ್ಯೆ' ಎಂದು ವಿಚಾರಿಸಿದಳು.

'ಮೇಡಂ, ನನ್ನ ಅರ್ಜಿಗೆ ಎರಡೂವರೆ ಸಾವಿರ

